ವಾರಿಗೆಯವುನು ಆದೀಶ. ಒಂದೋ ಎರಡೋ ವರ್ಷ ಚಿಕ್ಕನಿರಬೇಕು ಅಷ್ಟೆ. ಶ್ರಾವಣಮಾಸದಾಗ ಸುತ್ತಲೂರಿನ ಯುವಕರು ನದಿಗೆ ಈಜಾಡಾಕ ಸೇರ್ತಿದ್ದರಲ್ಲ. ಅದರಾಗ ಮರುಳಶಂಕರ, ಆದೀಶ ಸೇರ್ತಿದ್ದರಂತ. ಯಾವಾಗ ನದಿ ಮರುಳಶಂಕರನನ್ನ ನುಂಗಿತ್ತೊ... ಅಂದಿನಿಂದ ಈಜಾಡದು, ಪಂಥ ಕಟ್ಟದು ಎಲ್ಲ ನಿಂತು ಹೋಯ್ತು...'

ಶಿವಸಂಗಪ್ಪ ತನ್ನ ಕಣ್ಣಿಗೆ ಪಂಜೆಯ ಕೊನೆಯಿಂದ ಒತ್ತಿಕೊಂಡ!

ಇಬ್ಬರಲ್ಲಿ ಮಾತು ನಿಂತವು!

'ತಾತ, ಅಪ್ಪ, ಪ್ರಸಾದದ ಕೋಣೆಗೆ ಬರ್ರಿ, ಊಟಕ್ಕ ಸಜ್ಜು ಮಾಡೀನಿ' ಶಿವಗೀತನೇ ಬಂದು ಕರೆದಳು. ಆಕೆಯೂ ಚಿಂತೆ ಹಚ್ಚಿಕೊಂಡು ಬಾಡಿದ್ದಂತೆ ಕಂಡಿತು ತಾತನಿಗೆ.

'ತಾತ, ಕಾಲ್ಮಡದು ಬರ್ತೀನಿ. ಮಗಳನ್ನು ಮಾತಾಡಿಸಿ ಬಾ, ಊಟಕ್ಕ ಹೊತ್ತಾಗ್ಯಾದ...' ಎಂದು ಹೋದ.

'ಮಗ್ಳ, ಗೀತಮ್ಮ, ಬೇಶಿದ್ದೇನಮ್ಮ...?' ತಾತ ಕೇಳಿದ.

'ಹೂಂ ತಾತ, ಬೇಶದೀನಿ. ಮಾಂತಪುರಕ್ಕ ಹೋಗಿದ್ದೇನು ತಾತ...? ಅಪ್ಪ-ಅಮ್ಮ...'

'ಅವುರೂ ಸಿದ್ರಾಮಪುರಕ್ಕ ಅಮವಾಸೆಗೆ ಬಂದಿದ್ರವ್ವ. ಬೇಸಾರ... ನಿನ್ನ ನೆನಸಿಗಂಡು ಕಣ್ಣೀರ ಹಾಕ್ತಾರ...'

'ನದ್ಯಾಗಿನ ಹರಿವು ಕಮ್ಮಿಯಾದ್ರ ನಾನು, ಮಗ ಹೋಗಿ ಬರ್ತಿವಿ, ಬಂಡಿ ಕಟ್ಟಿಸಿಕೊಂಡು.'

'ಮಗ್ಳ, ಇಲ್ಲಿ ಬಾ' ಬಳಿಗೆ ಕರದು, 'ಆದೀಶ ನಿನ್ನ ಮೆಚ್ಚಿಕೊಂಡಾನ! ನಿನ್ನ ಮದುವಿ ಆಗ್ತೀನಂತ ಬಂದು ಹೇಳಿ ಹೋದ. ಅವನದ್ದು ದಿಟದ ನಿರ್ಧಾರ ಐತೆ. ನಿಮ್ಮಿಬ್ಬರ ಮದುವೆ ಆಗ್ತದೋ ಬಿಡ್ತದೋ! ಬಸವನ ದಯೇ ಇರ್ಲಿ ಅಂತ ನಾನು ಪ್ರಯತ್ನ ಮಾಡ್ತೀದ್ದೀನಿ. ನಿನ್ನ ಒಪ್ಪಿಗೆ ಐತೇನಮ್ಮ...!' ತಾತ ಕರುಣೆ ತುಂಬಿಕೊಂಡು ಕೇಳಿದ. ಶಿವಗೀತನಿಗೆ ದುಃಖ ಒತ್ತಿ ಬಂತು. ಸೆರಗನ್ನು ಬಾಯಿಗೆ ಒತ್ತಿಕೊಂಡು ನಿಂತಳು.

'ಆತನ ಒಪ್ಪಿಗೆ ಇದ್ದಂಗ. ನಿನ್ನ ಒಪ್ಪಿಗೇನೂ ಬೇಕಮ್ಮ. ವಿಚಾರ ಮಾಡಿ ಹೇಳು. ಧೈರ್ಯದಿಂದಿರು'

'ತಾತ...' ಎಂದು ಬಗ್ಗಿ ತಾತನ ಪಾದಕ್ಕೆ ತಲೆಯಿಟ್ಟು ಸಣಮಾಡಿ, ಎದ್ದು, 'ನಿನ್ನದು, ಅಪ್ಪನದು (ಶಿವಸಂಗಪ್ಪ), ಮನೆಮಂದಿಗೆಲ್ಲ ಒಪ್ಪಿಗೆಯಿದ್ರ ಮಾತ್ರ ನಾನು ಒಪ್ಪಿಗಂತೀನಿ. ಎಲ್ಲರ ದಯೇ ಇದ್ರ ನನ್ನ ಒಪ್ಪಿಗೆ ಐತೆ ತಾತ' ಎಂದಳು ದಿಟದಿಂದ.

'ಮಗ್ಳೇ, ನಿನ್ನ ಶರಣು ಶರಣಾರ್ಥಿ. ನಿನ್ನ ಒಪ್ಪಿಗೆ ತಿಳಿದು ಜೀವ ಬಂತು. ಮನಕ್ಕಂಜಿ, ಜನಕ್ಕಂಜಿ ಬದುಕುವ ಸಣ್ಣ ಜೀವ ನಿಂದು. ಬಸವನ ದಯೆಯಿಂದ ಮದುವೆ ನಡೀತು ಅಂದ್ರ ನಾನು ಹುಟ್ಟಿದ್ದು ಸಾರ್ಥಕ! ವಚನತತ್ತ್ವಗಳನ್ನು ಬದುಕಿದ್ದುದು ಸಾರ್ಥಕ!' ತಾತನೂ ತನ್ನ ಸೆಲ್ಲೆಯಿಂದ ಕಣ್ಣಿಗೆ ಒತ್ತಿಕೊಂಡ.

'ತಾತ, ಕಲ್ಯಾಣದಾಗ ಬಸವಣ್ಣ ನನ್ನಂಥ ಹೆಣ್ಣುಮಕ್ಕಳಿಗೆ ಮದುವೆ ಮಾಡಿಸಿ 'ಪುಣ್ಯಗಿತ್ತಿಯರು' ಎಂದು ಕರೆಯುತ್ತಿದ್ದನಂತ ನೀನೇ ಶ್ರಾವಣ ಮಾಸದಾಗ ಸಂಜೆ ಹೊತ್ತು ಮನೆಮಂದಿಗೆ, ಊರುಕೇರಿ ಮಂದಿಗೆ ಕಥೆ ಹೇಳಿದ್ದು ನನ್ಗ ನೆನಪದ' ಶಿವಗೀತ ನೆನಸಿಕೊಂಡು ಹೇಳಿದಳು.

'ಹೌದ ತಾಯೀ...? ನಿನ್ಗ ನೆನಪೈತೆ ಅನ್ನು, ಬಸವನ ಪ್ರೇರಣೆ ಆದೀಶನಿಗೆ ಆಗಿರ್ಬೇಕು. ಇಲ್ಲಂದ್ರ ಈ ಪ್ರಯತ್ನಗಳು ಯಾಕ ನಡಿತಿದ್ದವು...'

'ಬಾ ತಾತ' ಶಿವಸಂಗಪ್ಪ ಬಂದು ಪ್ರಸಾದಕ್ಕೆ ಕರೆದ. ಎಲ್ಲರೂ ಹೋದರು.

* * *

ಪ್ರಸಾದದ ಕೋಣೆಯಲ್ಲಿ ಶಿವಸಂಗಪ್ಪ, ಶಿವಮಲ್ಲಯ್ಯ ತಾತನು ಉಂಡು ಅಲ್ಲೇ ಕುಂತರು. ಶಿವಸಂಗಪ್ಪನ ಹಿರಿಸೊಸೆ ಸಾವಿತ್ರಿ, ಕಿರಿಸೊಸೆ ಗಂಗಾಂಬಿಕೆ, ಅವರ ಮಕ್ಕಳು ಎಲ್ಲರೂ ಕೂಡಿಯೇ ಊಟ ಮುಗಿಸಿದ ಮ್ಯಾಲೆ ಬಹಳ ಹೊತ್ತು ಮಾತಾಡಿಕೊಂಡು ಕುಂತು ಕಾಲ ಕಳೆಯುತ್ತಿದ್ದರು. ತಾತನಿಗೆ ಸಿದ್ರಾಮಪುರಕ್ಕೆ ಹೋಗಲು ನೆನಪಾಗಿ ಎದ್ದು ನಿಂತ. ಶಿವಸಂಗಪ್ಪನೂ ಮತ್ತದೆ ತಮ್ಮ ಕೋಣೆಗೆ ಬಂದರು. `ನಾನು ಬರ್ತೀನಿ ಶಿವಸಂಗಪ್ಪ' ಅಂದ. ಆದರೆ ಶಿವಸಂಗಪ್ಪ `ಈ ದಿನ ಇಲ್ಲೇ ವಸತಿ ಮಾಡು ತಾತ. ನನ್ಗ ನೀನಿದ್ರ ಸಮಾಧಾನ ಇರ್ತದ. ಇದೊಂದು ಹೊಸ ಚಿಂತೆ ಸೇರಿಕೊಂಡು ನಿದ್ದೆ ಇಲ್ದಂಗ ಆಗ್ಯಾದ' ಅಂದು ಆರಾಮ ಕುರ್ಚಿ ಮ್ಯಾಲೆ ಕುಂತು, ತಾತನನ್ನೂ ಕೂಡಿಸಿದ.

'ಮಕ್ಕಳ ಮುಂದ, ಸೊಸೆಯರ ಮುಂದ ಒಂದು ಸಲ ವಿಷಯ ತಿಳಿಸಿ ನೋಡು ಏನಂತಾರ?' ತಾತ.

'ಅಲ್ಲ, ತಾತ, ನನ್ನಲ್ಲೇ ಈ ವಿಚಾರ ಬಗೆ ಹರದಿಲ್ಲ. ಇನ್ನ ಅವರನ್ನ ಕೇಳಿ ಗೊಂದಲ ಯಾಕ ಮಾಡ್ಲಿ?'

'ಹೌದು. ನಾನೊಂದು ಮಾತು ಹೇಳ್ತೀನಿ. ಅದು



